ಕರ್ನಾಟಕ ವಿಧಾನ ಸಭೆ

ಸೋಮವಾರ ೨೩ನೇ ಫೆಬ್ರುವರಿ ೧೯೮೩

ವಿಧಾನ ಸೌಧದಲ್ಲಿರುವ ವಿಧಾನಸಭಾ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಜವಳಿ) ಪೀಠವನ್ನಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಬಂಕಾಪುರ ಗ್ರಾಮದಲ್ಲಿ ಹಿಂದುಳಿದ ವರ್ಗದ ಪ್ರೌಢಶಾಲೆಯನ್ನು ಪ್ರಾರಂಭಿಸುವುದು

೧೧೮ (೫೦೫) ಶ್ರೀ ನೀಲಕಂಠಗೌಡ ಪಾಟೀಲ್ (ಶಿಗ್ಗಾಂವ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧) ಬಂಕಾಪುರ ಗ್ರಾಮದಲ್ಲಿ ಸರ್ಕಾರಿ ಹಿಂದುಳಿದ ವರ್ಗದ ಪ್ರೌಢಶಾಲೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

೨) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತ ಮಾಡಬಹುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

೧) ಇಲ್ಲ.

೨) ಈ ಮೇಲೆ ಹೇಳಿದ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ನೀಲಕಂಠಗೌಡ ಪಾಟೀಲ್.—ಹಿಂದೆ ಸಚಿವರಿಗೆ ಸಾಕಷ್ಟು ಬಾರಿ ಈ ವಿಷಯದಲ್ಲಿ ಮನವಿ ಅರ್ಪಿಸಿದ್ದರೂ ಏನೂ ಮಾಡಲಿಲ್ಲ. ಬಂಕಾಪುರ ಗ್ರಾಮದಲ್ಲಿ ಹಿಂದುಳಿದ ವರ್ಗದ ಜನಸಂಖ್ಯೆ ಹೆಚ್ಚಾಗಿರುವುದರಿಂದ ಅಲ್ಲಿ ಪ್ರೌಢಶಾಲೆ ತೆರೆಯುವ ಅವಶ್ಯಕತೆ ಇದೆ ಎಂದು ಸಚಿವರಿಗೆ ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಹಿಂದುಳಿದ ವರ್ಗದವರಿಗೆ ಪ್ರೌಢಶಾಲೆ ತೆರೆಯಬೇಕೆಂಬುದು ಸಮಂಜಸವಲ್ಲ. ಆದರೂ ಪ್ರೌಢಶಾಲೆ ಬೇಕೆಂದು ಕೇಳುತ್ತಿದ್ದಾರೆ. ಸರ್ಕಾರಿ ಪ್ರೌಢಶಾಲೆಗಳ ಸ್ಥಾಪನೆ ಬೇಡವೆಂದು ಕಳೆದ ಸಾರಿ ತೀರ್ಮಾನ ಮಾಡಿತ್ತು. ಈ ಸಾರಿ ಇನ್ನೂ ಹೆಚ್ಚಾರ ಮಾಡಿಲ್ಲ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಎಸ್. ಮಣಿ—(ಸದಸ್ಯರು ಹಾಜರಿರಲಿಲ್ಲ)

ಶ್ರೀ ಪಂಪಾಪತಿ—(ಸದಸ್ಯರು ಹಾಜರಿರಲಿಲ್ಲ)

ಕಲಘಟಗಿ ತಾಲ್ಲೂಕಿಗೆ ಪ್ರೌಢಶಾಲೆ ಮಂಜೂರಾತಿ

೧೨೧ (೫೦೭ ಎ) ಶ್ರೀ ಜಿ. ಸಿ. ಸಿದ್ಧನಗೌಡ (ಕಲಘಟಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ? ಆ ಪೈಕಿ ಕಲಘಟಗಿ ತಾಲ್ಲೂಕಿನಲ್ಲಿ ಎಷ್ಟಿವೆ ? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಕೆಳಕಂಡ ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗುವುದೇ?

೧. ಸುರಶೆಟ್ಟಿ ಕೊಪ್ಪ
೨. ಸಂಗಮೇಶ್ವರ (ಕಲಘಟಗಿ ತಾಲ್ಲೂಕು)
೩. ಕುರುಡಿಕೇರಿ (ಹುಬ್ಬಳ್ಳಿ ತಾಲ್ಲೂಕು)

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು):—

ಆ) ೧೪೨೫ (ರಾಜ್ಯದಲ್ಲಿ ಒಟ್ಟು) ಕಲಘಟಗಿ ತಾಲ್ಲೂಕಿನಲ್ಲಿ ೧ ಶಾಲೆ "ದೇವಿಕೊಪ್ಪ" ಗ್ರಾಮದಲ್ಲಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರವ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಸದರಿ ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿಲ್ಲ.

ಖಾಸಗಿ ಪ್ರೌಢಶಾಲೆಗಳ ಮಂಜೂರಾತಿಗಾಗಿ ಯಾವ ಪ್ರಸ್ತಾವನೆ ಬಂದಿರುವುದಿಲ್ಲ. ಬಂದಲ್ಲಿ ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ/ತಾಲ್ಲೂಕುಗಳ ಹೆಸರು	ಸರ್ಕಾರಿ ಪ್ರೌಢಶಾಲೆಗಳು	ಕ್ರಮ ಸಂಖ್ಯೆ	ಜಿಲ್ಲೆ/ತಾಲ್ಲೂಕುಗಳ ಹೆಸರು	ಸರ್ಕಾರಿ ಪ್ರೌಢಶಾಲೆಗಳು
೧	೨	೩	೧	೨	೩
	೧. ಬೆಂಗಳೂರು ಜಿಲ್ಲೆ : ೧೦೧				
(೧)	ಬೆಂಗಳೂರು ಉತ್ತರ ತಾ :	೨೧	(೭)	ಹೊಸಕೋಟೆ	೮
(೨)	ಬೆಂಗಳೂರು ದಕ್ಷಿಣ ತಾ :	೨೪	(೮)	ಕನಕಪುರ	೬
(೩)	ಆನೇಕಲ್	೩	(೯)	ಮಾಗಡಿ	೫
(೪)	ಚನ್ನಪಟ್ಟಣ	೭	(೧೦)	ನೆಲಮಂಗಲ	೬
(೫)	ದೇವನಹಳ್ಳಿ	೬	(೧೧)	ರಾಮನಗರ	೭
(೬)	ದೊಡ್ಡಬಳ್ಳಾಪುರ	೯			
	೨. ಕೋಲಾರ ಜಿಲ್ಲೆ : ೯೩				
(೧೨)	ಬಾಗೇಪಲ್ಲಿ	೯	(೧೮)	ಕೋಲಾರ	೧೨
(೧೩)	ಬಂಗಾರಪೇಟೆ	೧೩	(೧೯)	ಮಾಲೂರು	೧೦
(೧೪)	ಚಿಕ್ಕಬಳ್ಳಾಪುರ	೪	(೨೦)	ಮುಳಬಾಗಿಲು	೫
(೧೫)	ಚಿಂತಾಮಣಿ	೧೦	(೨೧)	ಶಿಡ್ಲಘಟ್ಟ	೫
(೧೬)	ಗೌರಿಬಿದನೂರು	೧೦	(೨೨)	ಶ್ರೀನಿವಾಸಪುರ	೧೧
(೧೭)	ಗುಡಿಬಂಡೆ	೪			

೧	೨	೩	೧	೨	೩
		೩. ಶಿವಮೊಗ್ಗ ಜಿಲ್ಲೆ : ೯೩			
(೨೩)	ಭದ್ರಾವತಿ	೯	(೨೮)	ಶಿಕಾರಿಪುರ	೮
(೨೪)	ಚನ್ನಗಿರಿ	೧೧	(೨೯)	ಶಿವಮೊಗ್ಗ	೭
(೨೫)	ಹೊನ್ನಾಳಿ	೧೧	(೩೦)	ಸೊರಬ	೮
(೨೬)	ಹೊಸನಗರ	೧೧	(೩೧)	ತೀರ್ಥಹಳ್ಳಿ	೧೬
(೨೭)	ಸಾಗರ	೧೨			
		೪. ತುಮಕೂರು ಜಿಲ್ಲೆ : ೮೪			
(೩೨)	ಚಿಕ್ಕನಾಯಕನಹಳ್ಳಿ	೫	(೩೭)	ಪಾವಗಡ	೩
(೩೩)	ಗುಬ್ಬಿ	೧೧	(೩೮)	ಶಿರಾ	೧೦
(೩೪)	ಕೊರಟಗೆರೆ	೮	(೩೯)	ತಿಪಟೂರು	೮
(೩೫)	ಕುಣಿಗಲ್	೧೪	(೪೦)	ತುಮಕೂರು	೯
(೩೬)	ಮಧುಗಿರಿ	೧೦	(೪೧)	ತುರುವೇಕೆರೆ	೬
		೫. ಚಿತ್ರದುರ್ಗ ಜಿಲ್ಲೆ : ೮೧			
(೪೨)	ಚಳ್ಳಕೆರೆ	೧೪	(೪೬)	ಹೊಳಲ್ಕೆರೆ	೭
(೪೩)	ಚಿತ್ರದುರ್ಗ	೧೦	(೪೮)	ಹೊಸದುರ್ಗ	೫
(೪೪)	ದಾವಣಗೆರೆ	೧೩	(೪೯)	ಜಗಳೂರು	೬
(೪೫)	ಹರಿಹರ	೧೦	(೫೦)	ಮೊಳಕಾಲ್ಮೂರು	೩
(೪೭)	ಹಿರಿಯೂರು	೧೩			
		೬. ಮೈಸೂರು ಜಿಲ್ಲೆ : ೧೧೨			
(೫೧)	ಚಾಮರಾಜನಗರ	೧೦	(೫೭)	ಮೈಸೂರು	೧೬
(೫೨)	ಗುಂಡ್ಲುಪೇಟೆ	೮	(೫೮)	ನಂಜನಗೂಡು	೧೧
(೫೩)	ಹೆಗ್ಗಡದೇವನಕೋಟೆ	೧೨	(೫೯)	ಪಿರಿಯಾಪಟ್ಟಣ	೮
(೫೪)	ಹುಣಸೂರು	೧೨	(೬೦)	ಟಿ. ನರಸೀಪುರ	೯
(೫೫)	ಕೊಳ್ಳೇಗಾಲ	೮	(೬೧)	ಯಳಂದೂರು	೨
(೫೬)	ಕೃಷ್ಣರಾಜನಗರ	೧೬			
		೭. ಕೊಡಗು ಜಿಲ್ಲೆ : ೨೧			
(೬೨)	ಮಡಿಕೇರಿ	೬	(೬೪)	ವಿರಾಜಪೇಟೆ	೮
(೬೩)	ಸೋಮವಾರಪೇಟೆ	೭			

೧	೨	೩	೧	೨	೩
		೮. ಮಂಡ್ಯ ಜಿಲ್ಲೆ : ೬೯			
(೬೫)	ಕೃಷ್ಣರಾಜಪೇಟೆ	೧೦	(೬೯)	ನಾಗಮಂಗಲ	೧೦
(೬೬)	ಮದ್ದೂರು	೮	(೭೦)	ಪಾಂಡವಪುರ	೬
(೬೭)	ಮಳವಳ್ಳಿ	೧೩	(೭೧)	ಶ್ರೀರಂಗಪಟ್ಟಣ	೯
(೬೮)	ಮಂಡ್ಯ	೧೩			
		೯. ಹಾಸನ ಜಿಲ್ಲೆ : ೧೧೨			
(೭೨)	ಅಲೂರು	೬	(೭೬)	ಚೆನ್ನರಾಯಪಟ್ಟಣ	೨೨
(೭೩)	ಅರಕಲಗೂಡು	೯	(೭೭)	ಹಾಸನ	೨೨
(೭೪)	ಆರಸೀಕೆರೆ	೧೫	(೭೮)	ಹೊಳೆನರಸೀಪುರ	೧೭
(೭೫)	ಬೇಲೂರು	೧೨	(೭೯)	ಸಕಲೇಶಪುರ (ಮೀಸಲಿರಿಸಿದ್ದಾಗಿದೆ)	೯
		೧೦. ಚಿಕ್ಕಮಗಳೂರು ಜಿಲ್ಲೆ : ೪೪			
(೮೦)	ಚಿಕ್ಕಮಗಳೂರು	೧೦	(೮೪)	ನರಸಿಂಹರಾಜಪುರ	೩
(೮೧)	ಕಡೂರು	೭	(೮೫)	ಶೃಂಗೇರಿ	೫
(೮೨)	ಕೊಪ್ಪ	೪	(೮೬)	ತರೀಕೆರೆ	೮
(೮೩)	ಮೂಡಿಗೆರೆ	೯			
		೧೧. ದಕ್ಷಿಣ ಕನ್ನಡ ಜಿಲ್ಲೆ : ೧೧೯			
(೮೭)	ಬಂಟ್ವಾಳ	೧೧	(೯೧)	ಮಂಗಳೂರು	೧೭
(೮೮)	ಬೆಳ್ತಂಗಡಿ	೧೨	(೯೨)	ಪುತ್ತೂರು	೮
(೮೯)	ಕುಂದಾಪುರ	೧೯	(೯೫)	ಸೂಳ್ಯ	೧೨
(೯೦)	ಕಾರ್ಕಳ	೧೫	(೯೪)	ಉಡುಪಿ	೨೯
		೧೨. ಬೆಳಗಾಂ ಜಿಲ್ಲೆ : ೪೧			
(೯೫)	ಅಥಣಿ	೬	(೧೦೦)	ಖಾನಾಪುರ	೧
(೯೬)	ಬೆಳಗಾಂ	೪	(೧೦೧)	ಸೌದತ್ತಿ	೨
(೯೭)	ಚಿಕ್ಕೋಡಿ	೪	(೧೦೨)	ರಾಯಬಾಗ	೨
(೯೮)	ಗೋಕಾಕ	೮	(೧೦೩)	ರಾಮದುರ್ಗ	೨
(೯೯)	ಹುಕ್ಕೇರಿ	೬	(೧೦೪)	ಬೈಲಹೊಂಗಲ (ಸಂಘಗಾಗಿದೆ)	೫

೧	೨	೩	೧	೨	೩
		೧೩. ಧಾರವಾಡ ಜಿಲ್ಲೆ : ೭೦			
(೧೨೫)	ಬ್ಯಾಡಗಿ	೨	(೧೧೪)	ಮುಂಡರಗಿ	೧
(೧೦೬)	ಧಾರವಾಡ	೫	(೧೧೫)	ನರಗುಂದ	೭
(೧೦೭)	ಗದಗ	೫	(೧೧೬)	ನವಲಗುಂದ	೭
(೧೦೮)	ಹಾನಗಲ್	೭	(೧೧೭)	ರಾಣೆಬೆನ್ನೂರು	೪
(೧೦೯)	ಹಾವೇರಿ	೪	(೧೧೮)	ರೋಣ	೨
(೧೧೦)	ಹಿರೇಕೆರೂರು	೪	(೧೧೯)	ಸವಣೂರು	೩
(೧೧೧)	ಹುಬ್ಬಳ್ಳಿ	೭	(೧೨೦)	ಶಿಗ್ಗಾವ	೧
(೧೧೨)	ಕಲಘಟಗಿ	೧	(೧೨೧)	ಶಿರಹಟ್ಟಿ	೪
(೧೧೩)	ಕುಂದಗೋಳ	೫			
		೧೪. ಬಿಜಾಪುರ ಜಿಲ್ಲೆ : ೪೧			
(೧೨೨)	ಬಾದಾಮಿ	೪	(೧೨೮)	ಇಂಡಿ	೨
(೧೨೩)	ಬಾಗಲಕೋಟೆ	೩	(೧೨೯)	ಜಮಖಂಡಿ	೫
(೧೨೪)	ಬಸವನಬಾಗೇವಾಡಿ	೪	(೧೩೦)	ಮುದ್ದೆಬಿಹಾಳ	೧
(೧೨೫)	ಬಿಜಾಪುರ	೬	(೧೩೧)	ಮುಧೋಳ	೨
(೧೨೬)	ಬೀಳಗಿ	೨	(೧೩೨)	ಸಿಂಧಗಿ	೫
(೧೨೭)	ಹುನಗುಂದ	೭			
		೧೫. ಉತ್ತರ ಕನ್ನಡ ಜಿಲ್ಲೆ : ೩೩			
(೧೩೩)	ಅಂಕೋಲ	೪	(೧೩೯)	ಕುಮಟ	೨
(೧೩೪)	ಭಟ್ಕಳ	—	(೧೪೦)	ಸಿದ್ದಾಪುರ	೨
(೧೩೫)	ಹಳಿಯಾಳ	೬	(೧೪೧)	ಸಿರಸಿ	೨
(೧೩೬)	ಹೊನ್ನಾವರ	೩	(೧೪೨)	ಸೂಪ	೪
(೧೩೭)	ಕಾರವಾರ	೪	(೧೪೩)	ಯಲ್ಲಾಪುರ	೪
(೧೩೮)	ಮುಂಡಗೋಡ	೨			
		೧೬. ಗುಲ್ಬರ್ಗ ಜಿಲ್ಲೆ : ೧೨೫			
(೧೪೪)	ಅಫಜಲ್‌ಪುರ	೧೦	(೧೪೯)	ಜೇವರ್ಗಿ	೧೦
(೧೪೫)	ಆಳಂದ	೧೭	(೧೫೦)	ಸೇಡಂ	೯
(೧೪೬)	ಚಿಂಚೋಳಿ	೧೦	(೧೫೧)	ಹಹಪುರ	೧೦
(೧೪೭)	ಚಿತ್ತಾಪುರ	೧೭	(೧೫೨)	ಸುರಪುರ	೧೫
(೧೪೮)	ಗುಲ್ಬರ್ಗಾ	೧೫	(೧೫೩)	ಯಾದಗಿರಿ	೧೨

೧	೨	೩	೧	೨	೩
		೧೩. ಬಳ್ಳಾರಿ ಜಿಲ್ಲೆ : ೫೧			
(೧೫೪)	ಬಳ್ಳಾರಿ	೧೧	(೧೫೮)	ಹೊಸಪೇಟೆ	೧೧
(೧೫೫)	ಹಡಗಲಿ	೮	(೧೫೯)	ಕೂಡ್ಲಿಗಿ	೭
(೧೫೬)	ಸಿರಗುಪ್ಪ ಬೊಮ್ಮನಹಳ್ಳಿ	೨	(೧೬೦)	ಸಂಡೂರು	೬
(೧೫೭)	ಹರಪನಹಳ್ಳಿ	೭	(೧೬೧)	ಸಿರಗುಪ್ಪ	೨
		೧೪. ರಾಯಚೂರು ಜಿಲ್ಲೆ : ೨೮			
(೧೬೨)	ದೇವದುರ್ಗ	೫	(೧೬೭)	ಮಾನವಿ	೭
(೧೬೩)	ಗಂಗಾವತಿ	೮	(೧೬೮)	ರಾಯಚೂರು	೧೪
(೧೬೪)	ಕೊಪ್ಪಳ	೧೦	(೧೬೯)	ಸಿಂಧನೂರು	೬
(೧೬೫)	ಕುಷ್ಟಗಿ	೯	(೧೭೦)	ಯಲಬುರ್ಗ	೧೦
(೧೬೬)	ಲಿಂಗಸುಗೂರು	೯			
		೧೫. ಬೀದರ್ ಜಿಲ್ಲೆ : ೧೭			
(೧೭೧)	ಔರಾದ್	೧೨	(೧೭೪)	ಬೀದರ್	೮
(೧೭೨)	ಬಸವಕಲ್ಯಾಣ	೧೦	(೧೭೫)	ಹುಮ್ನಾಬಾದ್	೧೪
(೧೭೩)	ಭಾಲ್ಕಿ	೧೨			

ಒಟ್ಟು ಸರ್ಕಾರಿ ಪ್ರೌಢ ಶಾಲೆಗಳು : ೧೪೨೫

ಶ್ರೀ ಪಿ. ಸಿ. ಸಿದ್ದನಗೌಡ—ನಮ್ಮ ಕ್ಷೇತ್ರದ ಕೆಲವು ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆಗಳನ್ನು ಕೇಳಿದ್ದೇವೆ. ಈಗ ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ಹೈಸ್ಕೂಲ್ ಇದೆ. ಬೇರೆ ತಾಲ್ಲೂಕುಗಳಲ್ಲಿ ನೋಡಿದಾಗ ಇಲ್ಲಿ ತಾರತಮ್ಯ ಆಗಿದೆ ಎಂದು ಕಂಡು ಬರುತ್ತದೆ. ಕೆಲವು ಗ್ರಾಮಗಳಿಗೆ ಪ್ರೌಢಶಾಲೆ ಮಂಜೂರ್ಮಾಡುವ ಸಲುವಾಗಿ ಸರ್ಕಾರಕ್ಕೆ ಹಣ ತುಂಬಿದ್ದೇವೆ, ಮನವಿ ಕೊಟ್ಟಿದ್ದೇವೆ. ಯಾವಾಗ ಮಂಜೂರ್ಮಾಡಿ ಕೊಡುತ್ತೀರಾ ಎಂದು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್—ಆಲ್ಲಿ ಸಾಕಷ್ಟು ಖಾಸಗಿ ಪ್ರೌಢಶಾಲೆಗಳಿವೆ. ಆದರೂ ಸರ್ಕಾರಿ ಪ್ರೌಢ ಶಾಲೆ ಬೇಕೆಂದು ಕೇಳುತ್ತಿದ್ದಾರೆ, ಎಲ್ಲೆಲ್ಲಿ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಇದೆ ಎಂಬುದನ್ನು ಮಾಹಿತಿಸಂಗ್ರಹಿಸಿದ್ದೇವೆ. ಆ ಬಗ್ಗೆ ಈಗಾಗಲೇ ಉತ್ತರಿಸಿದ್ದೇವೆ. ಸರ್ಕಾರಿ ಶಾಲೆಗಳನ್ನು ಎಷ್ಟು ಕೊಡಬೇಕು ಅಥವಾ ಕೊಡಬೇಕೇ ಬೇಡವೆ ಎಂಬ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ. ಕೊಡಬೇಕಾದರೆ ಪರಿಶೀಲನೆ ಮಾಡಿಸುತ್ತೇನೆ.

ಗಾಣಿಗೆದಾರರಿಗೆ ಹಾಗೂ ಸರಬರಾಜುದಾರರಿಗೆ ಹಣದ ಪಾವತಿ

೧೨೨ (೨೬೭) ಶ್ರೀ ಬಿ. ಬಸವಲಿಂಗಪ್ಪ (ಬೆಲಹೊಂಕ)—ಮಾನ್ಯ ಲೋಕೋಪಯೋಗಿ, ಬಂದರು ಸಚಿವರು ಪ್ರಾಜೆಕ್ಟಾಫಿಸ್ಟ್ಸ್ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಕಾರ್ಯಪಾಲಕ ಅಭಿಯಂತರರವರ ವಿಭಾಗಗಳು ಎಷ್ಟಿವೆ ?
(ನಿರ್ಧಾರಿತ ಮತ್ತು ಲೋಕೋಪಯೋಗಿ ಇಲಾಖೆ)